Form No.4 (Civil)
Deposition
Sheets
(R.P.No.57)

# ವಿಶೇಷ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

## ಸ್ಪೆಷಲ್.ಸಿ. ಸಂಖ್ಯೆ: 110/2020

ಪ್ರಾ.ಸಾ. 1 ಚಾ.ಸಾ. 1

| | | |
|---|---|---|
| ಹೆಸರು | : | ಸುದರ್ಶನರೆಡ್ಡಿ |
| ತಂದೆಯ ಹೆಸರು | : | ಧರ್ಮಾರೆಡ್ಡಿ |
| ವಯಸ್ಸು | : | 34 ವರ್ಷ |
| ಉದ್ಯೋಗ | : | ಪಿಎಸಐ ಕಟಕ ಚಿಂಚೋಳಿ ಬೀದರ |
| ವಾಸ | : | ಬೀದರ |

ಪ್ರಮಾಣ ವಚನ ಭೋಧಿಸಿದ ದಿನಾಂಕ: 17-03-2025
ಮುಖ್ಯ ವಿಚಾರಣೆ ವಿಶೇಷ ಸರಕಾರಿ ಅಭಿಯೋಜಕರಿಂದ

ನಾನು ನವೆಂಬರ್ 2019 ರಿಂದ ಜೂನ್ 2021ರ ವರೆಗೆ ಕೆಂಭಾವಿ ಪೊಲೀಸಠಾಣೆಯಲ್ಲಿ ಪಿಎಸಐ ಎಂದು ಕರ್ತವ್ಯನಿರ್ವಹಿಸಿರುತ್ತೇನೆ.

2. ನನಗೆ ಚಾಸಾ-2 ರಿಂದ 18 ರವರ ಪರಿಚಯ ಇರುತ್ತದೆ. ದಿಃ 24.09.2020 ರಂದು ಬೆಳಿಗ್ಗೆ 10-00 ಗಂಟೆಗೆ ನಾನು ಠಾಣಾ ಪ್ರಭಾರದಲ್ಲಿದ್ದಾಗ ನನ್ನ ಜೊತೆ ಸಿಪಿಐ ಸಿ.ಇ.ಎನ್. ಯಾದಗಿರಿ ಅವರು ಮತ್ತು ಅವರ ಸಿಬ್ಬಂದಿಯವರು ಠಾಣೆಯಲ್ಲಿದ್ದಾಗ ನನಗೆ ಒಂದು ಮಾಹಿತಿ ಬಂದಿದ್ದು ಮುದ್ನೂರ (ಬಿ) ಗ್ರಾಮದಲ್ಲಿ ಶಂಕರಸಿಂಗ ಅವರ ಹೊಲದಲ್ಲಿ ಅನಧಿಕೃತವಾಗಿ ಗಾಂಜಾ ಬೆಳೆದಿದ್ದಾರೆ ಎಂದು ಮಾಹಿತಿ ಬಂದಿದ್ದು ಅದರಂತೆ ತಹಶೀಲ್ದಾರ ಹುಣಸಗಿ ಅವರಿಗೆ ಫೋನ್ ಮುಖಾಂತರ ಮಾಹಿತಿ ತಿಳಿಸಿ ದಾಳಿ ಮಾಡಲು ಠಾಣೆಗೆ ಬರುವಂತೆ ತಿಳಿಸಿರುತ್ತೇನೆ. ಹಾಗೆ ದಾಳಿ ಕಾಲಕ್ಕೆ ಪಂಚರು ಬೆಕೆಂದು ಮುದ್ನೂರ ಸರಕಾರಿ ಪ್ರೌಢ ಶಾಲೆಯ ಶಿಕ್ಷಕರಾದ ಗುರು ತಂದೆ ಸಂಗಪ್ಪ ಮತ್ತು ಅಬ್ದುಲ ಖಯುಮ ಅವರನ್ನು ಠಾಣೆಗೆ ಬರುವಂತೆ ನಮ್ಮ ಸಿಬ್ಬಂದಿಯವರಿಗೆ ಹೇಳಿ ಕಳುಹಿಸಿರುತ್ತೇನೆ. ಗಾಂಜಾ ತೂಕಮಾಡಲುವ ಬಗ್ಗೆ ಮಕ್ತುಮ ವಡಗೇರಾ ತುಕ ಯಂತ್ರ ಮಾಡುವವನ್ನು ಕರೆಸಿಕೊಂಡೆ ಫೋಟೊಗಳನ್ನು ತೆಗೆಯಲು ವಿಶ್ವನಾಥ ಫೋಟೊ ಗ್ರಾಫರ ಇವರನ್ನು ಕರೆಸಿಕೊಂಡೆ. ಹೊಲ ಗುರುತಿಸಲು ಗ್ರಾಮ ಲೆಖಾಧಿಕಾರಿ ಶಿಲಾ ಹೂಗಾರ ಅವರನ್ನು ಕರೆಯಿಸಿದೆ. ಡಿವೈಎಸಪಿ ಸುರಪೂರ ಅವರ ಅನುಮತಿ ಪಡೆದು ಬೆಳಿಗ್ಗೆ 11-30 ಗಂಟೆಗೆ

ಠಾಣೆಯನ್ನು ಬಿಟ್ಟು ನಮ್ಮ ಇಲಾಖಾ ಜೀಪನಲ್ಲಿ ನಾನು ಮತ್ತು ಸಿಬ್ಬಂದಿಯವರು ಹಾಗೂ ತಹಶೀಲ್ದಾರ ಅವರ ಇಲಾಖಾ ಜೀಪನಲ್ಲಿ ತಹಶೀಲ್ದಾರ ಮತ್ತು ಉಬಯ ಪಂಚರು, ತೂಕ ಮಾಡುವವರು, ಫೋಟೊ ಗ್ರಾಫರ ಮತ್ತು ಗ್ರಾಮಲೆಖಾಧಿಕಾರಿಗಳು, ಮತ್ತು ಸಿ.ಇ.ಎನ್. ಇನ್ಸಪೇಕ್ಟರ ಮತ್ತು ಅವರ ಸಿಬ್ಬಂದಿಗಳು ಎಲ್ಲರೂ ಹೊರಟು ಮುದ್ನೂರ ಗ್ರಾಮಕ್ಕೆ ಮಧ್ಯಾಹ್ನ 12-30 ಗಂಟೆಗೆ ಮುದ್ನೂರ ಗ್ರಾಮದ ಸರ್ವೆ ನಂ. 176 ಕ್ಕೆ ತಲುಪಿದೇವು. ನಮ್ಮನ್ನು ನೋಡಿ ಒಬ್ಬ ವ್ಯಕ್ತಿ ಓಡಿ ಹೋದ ನಾವು ಎಲ್ಲರೂ ಸೇರಿ ಆ ಹೊಲಕ್ಕೆ ಹೋಗಿ ಪರಿಶೀಲಿಸಿದಾಗ ಹತ್ತಿ ಹೊಲದಲ್ಲಿ ಅಲ್ಲಲ್ಲಿ ಕಾಣದ ಹಾಗೆ ಅನಧಿಕೃತವಾಗಿ ಗಾಂಜಾ ಗಿಡಗಳನ್ನು ಬೆಳೆದಿದ್ದು ಕಂಡು ಬಂತು. ಉಬಯ ಪಂಚರ ಸಮಕ್ಷಮ ಸಿಬ್ಬಂದಿಗಳ ಸಹಾಯದಿಂದ 3 ವರೆ ಅಡಿ ಇರುವ ಒಟ್ಟು 20 ಗಿಡಗಳು, ಮತ್ತು 2 ಅಡಿಯ 70 ಗಿಡಗಳನ್ನು ಕಿತ್ತಿ ಪರಿಶೀಲಿಸಿ ನೋಡಲಾಗಿ 20 ಗಿಡಗಳಲ್ಲಿ ಹೂ ಮತ್ತು ಕಾಯಿ ಇತ್ತು. ಪಂಪರಿಗೆ ಇದ್ದನ್ನು ತಿಳಿಸಿದ್ದೇನೆ. ಆ ಗಿಡಗಳನ್ನು ತೂಕಮಾಡಲು ಬಂದಿದ್ದ ಮಕ್ತುಮ ಅವರ ಸಹಾಯದಿಂದ ಅಲ್ಲೆ ತೂಕ ಮಾಡಿಸಿರುತ್ತೇನೆ. ಒಟ್ಟು 22 ಕೆ.ಜಿ. 400 ಗ್ರಾಮ ಇತ್ತು. ತೂಕ ಮಾಡುವ ಕಾಲಕ್ಕೆ ಫೋಟೊಗಳನ್ನು ತೆಗೆಸಿ ವಿಡಿಯೋ ಮಾಡಿಸಿರುತ್ತೇನೆ. 20 ಗಿಡಗಳನ್ನು ತಲಾ 5 ರಂತೆ 4 ಪೆಂಡಿಗಳನ್ನು ಮಾಡಿಸಿ, ಒಟ್ಟು 5 ಪೆಂಡಿಗಳನ್ನು ಮಾಡಿ ಒಂದೊಂದು ಪೆಂಡಿಯಿಂದ ಆರ್.ಎಫ್.ಎಸ್.ಎಲ್. ಸಲುವಾಗಿ 100 ಗ್ರಾಮನ್ನು ಹೂ ಕಾಯಿ ಇರುವಂತೆ ತೆಗೆದು ಸ್ಯಾಮಪಲ ಸಲುವಾಗಿ ಬಿಳಿ ಚೀಲದಲ್ಲಿ ಹಾಕಿ ಅರಗಿನಿಂದ ಸೀಲ್ ಮಾಡಿ ಪಂಚರ ಸಹಿ ಇರುವ ಚೀಟಿ ಅದಕ್ಕೆ ಅಂಟಿಸಿರುತ್ತೇನೆ. ಸದರಿ ಪಂಚನಾಮೆಯನ್ನು ಮಧ್ಯಾಹ್ನ 1-30 ರಿಂದ 3-30 ಗಂಟೆಯ ವರೆಗೆ ಮಾಡಿರುತ್ತೇನೆ. ನಂತರ ಮುದ್ದೆ ಮಾಲುಗಳನ್ನು ಮತ್ತು ಜಪ್ತಿ ಪಂಚನಾಮೆ ತೆಗೆದುಕೊಂಡು ಠಾಣೆಗೆ ಹೋಗಿ ಸಂಜೆ 4-00 ಗಂಟೆಗೆ ಠಾಣಾಧಿಕಾರಿಯವರಿಗೆ ವರದಿ ಜೊತೆಗೆ ಮುದ್ದೆ ಮಾಲುಗಳನ್ನು ಮತ್ತು ಜಪ್ತಿ ಪಂಚನಾಮೆ ಕೊಟ್ಟಿರುತ್ತೇನೆ. ಸದರಿ ಜಪ್ತಿ ಪಂಚನಾಮೆ ನಿ.ಪಿ.1 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.1(ಎ) ಎಂದು ಗುರುತಿಸಲಾಯಿತು. ಪಂಚನಾಮೆ ಕಾಲಕ್ಕೆ ತೆಗೆದ ನಕ್ಷೆ ನಿ.ಪಿ.2 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.2(ಎ) ಎಂದು ಗುರುತಿಸಲಾಯಿತು. ಆ ಕಾಲಕ್ಕೆ ತೆಗೆದ 4 ಭಾವಚಿತ್ರಗಳನ್ನು ನಿ.ಪಿ.3 ರಿಂದ 6 ಎಂದು ಗುರುತಿಸಲಾಯಿತು. ವರದಿಯನ್ನು ನಿ.ಪಿ.7 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.7(ಎ) ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ನ್ಯಾಯಾಲಯದ ಮುಂದೆ ಇರುವ ಸೀಲ್ ಮಾಡಿದ್ದ ಬಿಳಿ ಬಟ್ಟೆಯಲ್ಲಿ ಸುತ್ತಿದ್ದ ಮುದ್ದೆ ಮಾಲನ್ನು ತೆಗೆದು ತೋರಿಸಿದ್ದು ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಮು.ಮಾ.1 ಎಂದು ಗುರುತಿಸಲಾಯಿತು. ಸದರಿ ಜಮೀನು ಅಗ್ನಿ ಸೀಮಾಂತರದಲ್ಲಿ ಬರುತ್ತದೆ.

<u>ಪಾಟೀ ಸವಾಲು ಆರೋಪಿಯ ಪರವಾಗಿ ಶ್ರೀ. ಕೆ.ಟಿ. ವಕೀಲರಿಂದ</u>

3. ಆರೋಪಿಯನ್ನು ಇದೇ ಮೊದಲಬಾರಿ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪಂಚರನ್ನು ಕರೆದುಕೊಂಡು ಹೋಗಲು ಅವರ ಮೇಲಾಧಿಕಾರಿಗಳ ಅನುಮತಿ ಪಡೆದಿರುವುದಿಲ್ಲ. ಸಿ.ಇ.ಎನ್. ಪೊಲೀಸ ಮತ್ತು ಸಿಪಿಐ ರವರು ನಮ್ಮಲ್ಲಿ ವಿಶೇಷ ಘಟಕ ಇದುದ್ದರಿಂದ ಬಂದಿದ್ದರು. ದೂರಿನಲ್ಲಿ ಅವರು ಯಾವ ಕಾರಣಕ್ಕೆ ಬಂದಿದ್ದರು ಎಂದು ನಮೂದು ಮಾಡಿಲ್ಲ ಎಂದರೆ ಸರಿ. ಬೀರಪ್ಪ ಪೇದೆ ಅವರು ಪಂಚರನ್ನು ಕರೆದುಕೊಂಡು ಬಂದರು. ನಾನು ಇವರನ್ನೆ ಕರೆದುಕೊಂಡು ಬನ್ನಿ ಎಂದು ಹೇಳಿ ಕಳುಹಿಸಿದ್ದೆ. ಈ ವಿಷಯವನ್ನು ದೂರಿನಲ್ಲಿ ಬರೆದಿಲ್ಲ ಎಂದರೆ ಸರಿಯಲ್ಲ. ನಾನು ಫೋನ್ ಮುಖಾಂತರ ತಹಶೀಲ್ದಾರ ಅವರನ್ನು ಕರೆಯಿಸಿದ್ದೇನು. ಬೀರಪ್ಪ ಪೇದೆ ಅವರೆ ತೂಕ ಮಾಡುವ ವ್ಯಕ್ತಿಯನ್ನು ಕರೆದುಕೊಂಡು ಬಂದಿದ್ದರು. ಚಾಸಾ-2, 3 ಮತ್ತು 16 ರವರು ಸುಮಾರು ಅರ್ಧ ಗಂಟೆಗೆ ನಮ್ಮ ಠಾಣೆಗೆ ಬಂದರು. ತಹಶೀಲ್ದಾರ ರವರು ಸುಮಾರು 45 ನಿಮಿಷಕ್ಕೆ ಠಾಣೆಗೆ ಬಂದರು. ಅವರೆಲ್ಲರೂ ಬಂದ ನಂತರ ಸಾಮೋಹಿಕವಾಗಿ ಮಾಹಿತಿ ಕೊಟ್ಟೆ. ಆ ಹೊಲದ ಚೆಕ್ಕು ಬಂದಿ ಪೂರ್ವಕ್ಕೆ ರಾಜಶೇಖರ ಅವರ ಹಾಳು ಬಿದ್ದ ಹೊಲ, ಪಶ್ಚಿಮಕ್ಕೆ ಬಂದಗಿ ಶಹಾ ಅವರ ಹೊಲ, ಉತ್ತರಕ್ಕೆ ಸಾರ್ವಜನಿಕ ಹಳ್ಳ, ದಕ್ಷಿಣಕ್ಕೆ ಆಶಾಬಿ ಅವರ ಹೊಲ ಇದೆ. ನಾನು ಆರೋಪಿಯನ್ನು ಸುಮಾರು 50-60 ಮೀಟರ ದೂರದಿಂದ ನೋಡಿದೆ. ಆತ ದಕ್ಷಿಣದ ಕಡೆಗೆ ಓಡಿ ಹೋದ. ನಾವು ಜಮೀನಿಗೆ ದಾಳಿಗೆ ಹೋದಾಗ ಅಕ್ಕ ಪಕ್ಕದವರು ಬಂದಿರಲಿಲ್ಲ. ನಾನು ಊರಿನ ಜನಗಳ ಮತ್ತು ಅಕ್ಕ ಪಕ್ಕದ ಹೊಲಗಳವರ ಹೇಳಿಕೆ ಪಡೆಯಲು ಪ್ರಯತ್ನ ಮಾಡಲಿಲ್ಲ. ನಮ್ಮ ಠಾಣೆಯಿಂದ ಆರೋಪಿತನ ಹೊಲಕ್ಕೆ ಮುಧ್ನೂರ ಗ್ರಾಮಕ್ಕೆ ಹೋಗಿ ಪಶ್ಚಿಮ ಮುಖವಾಗಿ ಇರುವ ಕೆನಾಲ ಮುಖಾಂತರ ಹೋಗಿರುತ್ತೇನೆ.

4. ಸದರಿ ಜಮೀನು ಖುಷ್ಕಿ ಹೊಲ. ಸರ್ವೆ ನಂ. 176 ಒಟ್ಟು ಎಷ್ಟು ಎಕರೆ ಇದೆ ಎಂದು ಗೊತ್ತಿಲ್ಲ. ಸದರಿ ಹೊಲ ಯಾರ ಹೆಸರಿನಲ್ಲಿ ಇದೆ ಎಂದು ಗೊತ್ತಿಲ್ಲ. ಅದರ ಪಹಣಿಯನ್ನು ನಾನು ನೋಡಿಲ್ಲ. ನಾನು ಠಾಣೆ ಬಿಡುವಾಗ ಠಾಣಾ ದಿನಚರಿಯಲ್ಲಿ ನಮೂದು ಮಾಡಿರುತ್ತೇನೆ. ವಾಪಾಸ ಬಂದ ನಂತರ ಠಾಣಾ ದಿನಚರಿಯಲ್ಲಿ ಬರೆದಿದ್ದೇನೆ. ನಾನು ಸಸ್ಯ ಶಾಸ್ತ್ರದಲ್ಲಿ ಯಾವುದೇ ಪದವಿ ಪಡೆದಿಲ್ಲ. ನನಗೆ ಗಾಂಜಾ ಗಿಡ ಗುರುತಿಸುವ ಬಗ್ಗೆ ವಿಶೇಷ ತರಬೇತಿ ಆಗಿಲ್ಲ ಆದರೆ ಸಾಮಾನ್ಯವಾಗಿ ತಿಳಿಸಿರುತ್ತಾರೆ. ನನಗೆ ಆ ಪಠ್ಯವನ್ನು ಹೇಳಿದ್ದ ಶಿಕ್ಷಕರ ಹೆಸರು ನೆನಪಿಲ್ಲ. ಸರ್ವೆ ನಂ. 176 ಆರೋಪಿಗೆ ಸಂಬಂಧಪಟ್ಟ ಹೊಲ ಅಲ್ಲ ಎಂದರೆ ನನಗೆ ಗೊತ್ತಿಲ್ಲ. ಆರೋಪಿ ಓಡಿ ಹೋಗಿದ್ದು ಮಾತ್ರ ಗೊತ್ತು. ನಾನು ದಾಳಿಗೆ ಹೋಗಿಲ್ಲ ಮತ್ತು ಠಾಣೆಯಲ್ಲಿ ಕುಳಿತು ಎಲ್ಲ ದಾಖಲೆಗಳನ್ನು ತಯಾರಿಸಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

5. ದಿಃ 24.09.2020 ರಂದು ಬೆಳಿಗ್ಗೆ 10-00 ಗಂಟೆಗೆ ನಾನು ಠಾಣಾ ಪ್ರಭಾರದಲ್ಲಿದ್ದಾಗ ನನ್ನ ಜೊತೆ ಸಿಪಿಐ ಸಿ.ಇ.ಎನ್. ಯಾದಗಿರಿ ಅವರು ಮತ್ತು ಅವರ ಸಿಬ್ಬಂದಿಯವರು ಠಾಣೆಯಲ್ಲಿದ್ದಾಗ ನನಗೆ ಒಂದು ಮಾಹಿತಿ ಬಂದಿದ್ದು ಮುಧ್ನೂರ (ಬಿ) ಗ್ರಾಮದಲ್ಲಿ ಶಂಕರಸಿಂಗ

ಅವರ ಹೊಲದಲ್ಲಿ ಅನಧಿಕೃತವಾಗಿ ಗಾಂಜಾ ಬೆಳೆದಿದ್ದಾರೆ ಎಂದು ಮಾಹಿತಿ ಬಂದಿದ್ದು ಅದರಂತೆ ತಹಶೀಲ್ದಾರ ಹುಣಸಗಿ ಅವರಿಗೆ ಫೋನ್ ಮುಖಾಂತರ ಮಾಹಿತಿ ತಿಳಿಸಿ ದಾಳಿ ಮಾಡಲು ಠಾಣೆಗೆ ಬರುವಂತೆ ತಿಳಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹಾಗೆ ದಾಳಿ ಕಾಲಕ್ಕೆ ಪಂಚರು ಬೆಕೆಂದು ಮುದ್ನೂರ ಸರಕಾರಿ ಪ್ರೌಢ ಶಾಲೆಯ ಶಿಕ್ಷಕರಾದ ಗುರು ತಂದೆ ಸಂಗಪ್ಪ ಮತ್ತು ಅಬ್ದುಲ ಖಯುಮ ಅವರನ್ನು ಠಾಣೆಗೆ ಬರುವಂತೆ ನಮ್ಮ ಸಿಬ್ಬಂದಿಯವರಿಗೆ ಹೇಳಿ ಕಳುಹಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಗಾಂಜಾ ತೂಕಮಾಡಲುವ ಬಗ್ಗೆ ಮಕ್ತುಮ ವಡಗೇರಾ ತುಕ ಯಂತ್ರ ಮಾಡುವವನ್ನು ಕರೆಸಿಕೊಂಡೆ ಫೋಟೊಗಳನ್ನು ತೆಗೆಯಲು ವಿಶ್ವನಾಥ ಫೋಟೊ ಗ್ರಾಫರ ಇವರನ್ನು ಕರೆಸಿಕೊಂಡೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹೊಲ ಗುರುತಿಸಲು ಗ್ರಾಮ ಲೆಖಾಧಿಕಾರಿ ಶಿಲಾ ಹೂಗಾರ ಅವರನ್ನು ಕರೆಯಿಸಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಡಿವೈಎಸಪಿ ಸುರಪೂರ ಅವರ ಅನುಮತಿ ಪಡೆದು ಬೆಳಿಗ್ಗೆ 11-30 ಗಂಟೆಗೆ ಠಾಣೆಯನ್ನು ಬಿಟ್ಟು ನಮ್ಮ ಇಲಾಖಾ ಜೀಪನಲ್ಲಿ ನಾನು ಮತ್ತು ಸಿಬ್ಬಂದಿಯವರು ಹಾಗೂ ತಹಶೀಲ್ದಾರ ಅವರ ಇಲಾಖಾ ಜೀಪನಲ್ಲಿ ತಹಶೀಲ್ದಾರ ಮತ್ತು ಉಬಯ ಪಂಚರು, ತೂಕ ಮಾಡುವವರು, ಫೋಟೊ ಗ್ರಾಫರ ಮತ್ತು ಗ್ರಾಮಲೆಖಾಧಿಕಾರಿಗಳು, ಮತ್ತು ಸಿ.ಇ.ಎನ್. ಇನ್ಸಪೇಕ್ಟರ ಮತ್ತು ಅವರ ಸಿಬ್ಬಂದಿಗಳು ಎಲ್ಲರೂ ಹೊರಟು ಮುದ್ನೂರ ಗ್ರಾಮಕ್ಕೆ ಮಧ್ಯಾಹ್ನ 12-30 ಗಂಟೆಗೆ ಮುದ್ನೂರ ಗ್ರಾಮದ ಸರ್ವೆ ನಂ. 176ಕ್ಕೆ ತಲುಪಿದೇವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮನ್ನು ನೋಡಿ ಒಬ್ಬ ವ್ಯಕ್ತಿ ಓಡಿ ಹೋದ ನಾವು ಎಲ್ಲರೂ ಸೇರಿ ಆ ಹೊಲಕ್ಕೆ ಹೋಗಿ ಪರಿಶೀಲಿಸಿದಾಗ ಹತ್ತಿ ಹೊಲದಲ್ಲಿ ಅಲ್ಲಲ್ಲಿ ಕಾಣದ ಹಾಗೆ ಅನಧಿಕೃತವಾಗಿ ಗಾಂಜಾ ಗಿಡಗಳನ್ನು ಬೆಳೆದಿದ್ದು ಕಂಡು ಬಂತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಉಬಯ ಪಂಚರ ಸಮಕ್ಷಮ ಸಿಬ್ಬಂದಿಗಳ ಸಹಾಯದಿಂದ 3 ವರೆ ಅಡಿ ಇರುವ ಒಟ್ಟು 20 ಗಿಡಗಳು, ಮತ್ತು 2 ಅಡಿಯ 70 ಗಿಡಗಳನ್ನು ಕಿತ್ತಿ ಪರಿಶೀಲಿಸಿ ನೋಡಲಾಗಿ 20 ಗಿಡಗಳಲ್ಲಿ ಹೂ ಮತ್ತು ಕಾಯಿ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಂಪರಿಗೆ ಇದ್ದನ್ನು ತಿಳಿಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಗಿಡಗಳನ್ನು ತೂಕಮಾಡಲು ಬಂದಿದ್ದ ಮಕ್ತುಮ ಅವರ ಸಹಾಯದಿಂದ ಅಲ್ಲೆ ತೂಕ ಮಾಡಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಒಟ್ಟು 22 ಕೆ.ಜಿ. 400 ಗ್ರಾಮ ಇತ್ತು. ತೂಕ ಮಾಡುವ ಕಾಲಕ್ಕೆ ಫೋಟೊಗಳನ್ನು ತೆಗೆಸಿ ವಿಡಿಯೋ ಮಾಡಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 20 ಗಿಡಗಳನ್ನು ತಲಾ 5 ರಂತೆ 4 ಪೆಂಡಿಗಳನ್ನು ಮಾಡಿಸಿ, ಒಟ್ಟು 5 ಪೆಂಡಿಗಳನ್ನು ಮಾಡಿ ಒಂದೊಂದು ಪೆಂಡಿಯಿಂದ ಆರ್.ಎಫ್.ಎಸ್.ಎಲ್. ಸಲುವಾಗಿ 100 ಗ್ರಾಮನ್ನು ಹೂ ಕಾಯಿ ಇರುವಂತೆ ತೆಗೆದು ಸ್ಯಾಮಪಲ ಸಲುವಾಗಿ ಬಿಳಿ ಚೀಲದಲ್ಲಿ ಹಾಕಿ ಅರಗಿನಿಂದ ಸೀಲ್ ಮಾಡಿ ಪಂಚರ ಸಹಿ ಇರುವ ಚೀಟಿ ಅದಕ್ಕೆ

ಅಂಟಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಪಂಚನಾಮೆಯನ್ನು ಮಧ್ಯಾಹ್ನ 1-30 ರಿಂದ 3-30 ಗಂಟೆಯ ವರೆಗೆ ಮಾಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ಮುದ್ದೆ ಮಾಲುಗಳನ್ನು ಮತ್ತು ಜಪ್ತಿ ಪಂಚನಾಮೆ ತೆಗೆದುಕೊಂಡು ಠಾಣೆಗೆ ಹೋಗಿ ಸಂಜೆ 4-00 ಗಂಟೆಗೆ ಠಾಣಾಧಿಕಾರಿಯವರಿಗೆ ವರದಿ ಜೊತೆಗೆ ಮುದ್ದೆ ಮಾಲುಗಳನ್ನು ಮತ್ತು ಜಪ್ತಿ ಪಂಚನಾಮೆ ಕೊಟ್ಟಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಜಮೀನು ಅಗ್ನಿ ಸೀಮಾಂತರದಲ್ಲಿ ಬರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ-ಇಲ್ಲ</u>

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಯಾದಗಿರಿ.

Form No.4 (Civil)
Deposition
Sheets
(R.P.No.57)

# ವಿಶೇಷ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

## ಸ್ಪೆಷಲ್.ಸಿ. ಸಂಖ್ಯೆ: 110/2020

ಫ್ರಾ.ಸಾ. 2 ಚಾ.ಸಾ. 3

| | | |
|---|---|---|
| ಹೆಸರು | : | ಅಬ್ದುಲ ಖಯುಮ |
| ತಂದೆಯ ಹೆಸರು | : | ಮೃತುಜಾ |
| ವಯಸ್ಸು | : | 59 ವರ್ಷ |
| ಉದ್ಯೋಗ | : | ಸಹ ಶಿಕ್ಷಕರು ಸರಕಾರಿ ಪ್ರೌಢ ಶಾಲೆ ಮುದ್ನೂರ |
| ವಾಸ | : | ಮುದ್ನೂರ |

ಪ್ರಮಾಣ ವಚನ ಭೋಧಿಸಿದ ದಿನಾಂಕ: 17-03-2025
ಮುಖ್ಯ ವಿಚಾರಣೆ ವಿಶೇಷ ಸರಕಾರಿ ಅಭಿಯೋಜಕರಿಂದ

ನಾನು 2020 ರಿಂದ ಇಲ್ಲಿಯವರೆಗೆ ಸರಕಾರಿ ಪ್ರೌಢ ಶಾಲೆ ಮುದ್ನೂರದಲ್ಲಿ ಸಹ-ಶಿಕ್ಷಕರಾಗಿ ಕರ್ತವ್ಯ ನಿರ್ವಸುತ್ತಿದ್ದೇನೆ.

2. ನನಗೆ ಚಾಸಾ-1, 2, 4 ರಿಂದ 15 ರವರ ಪರಿಚಯ ಇದೆ. ಆರೋಪಿಯ ಪರಿಚಯ ಇದೆ. ದಿ: 24.09.2020 ರಂದು ನನ್ನನ್ನು ಮತ್ತು ಚಾಸಾ-2 ಗುರು ಸಹ-ಶಿಕ್ಷಕರು ಅವರನ್ನು ಕೆಂಭಾವಿ ಪೊಲೀಸಠಾಣೆಗೆ ಕರೆಯಿಸಿದ್ದರು. ಬೀರಪ್ಪ ಪೇದೆ ಬಂದು ಬೆಳಿಗ್ಗೆ 10-00 ಗಂಟೆಗೆ ಬರುವಂತೆ ಹೇಳಿ ನಮ್ಮನ್ನು ಕರೆದುಕೊಂಡು ಹೋದರು. ಅಗ್ನಿ ಸೀಮಾಂತರದ ಸರ್ವೆ ನಂ. 176 ರಲ್ಲಿ ಗಾಂಜಾ ಬೆಳೆದಿದ್ದಾರೆ ಎಂದು ಮಾಹಿತಿ ಬಂದಿದ್ದು ದಾಳಿ ಮಾಡಲು ಹೋಗಬೇಕು ನೀವು ಪಂಚರಾಗಿ ಸಹಕರಿಸಿ ಎಂದು ಹೇಳಿದರು. ಆ ಪ್ರಕಾರ ನಾವು ಒಪ್ಪಿಕೊಂಡೆವು. ನಾವು ಬೆಳಿಗ್ಗೆ 11-30 ಗಂಟೆಗೆ ಪೊಲೀಸಠಾಣೆಗೆ ಬಿಟ್ಟೆವು ಘಟಾ ಸ್ಥಳಕ್ಕೆ 12-30 ಗಂಟೆಗೆ ತಲುಪಿದೆವು. ನಾವು ಅಲ್ಲಿ ಹೋಗಿ ನಿಂತುಕೊಂಡೆವು ನಮ್ಮ ಮುಂದೆ 2 ಫೀಟನ 70 ಗಾಂಜಾ ಗಿಡಗಳನ್ನು ಮತ್ತು 3 ವರೆ ಫೀಟನ 20 ಗಾಂಜಾ ಗಿಡಗಳನ್ನು ಕಿತ್ತಿ ಅವುಗಳಲ್ಲಿ ನಾಲ್ಕು ನಾಲ್ಕು ಪೆಂಡಿ ಮಾಡಿ ಅದರ ಮೇಲೆ ಚೀಟಿ ಅಂಟಿಸಿ ನಮ್ಮ ಸಹಿ ಪಡೆದರು. ಅದನ್ನು ತೂಕ ಮಾಡಿದಾಗ ಒಟ್ಟು 22 ಕೆ.ಜಿ 400 ಗ್ರಾಮ ಗಾಂಜಾ ಇತ್ತು. ಪಂಚನಾಮೆಯನ್ನು ಮಧ್ಯಾಹ್ನ 1-30 ರಿಂದ 3-30 ಗಂಟೆಯವರೆಗೆ ಮಾಡಿದರು. ನಿ.ಪಿ.1ರಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ.1(ಬಿ) ಎಂದು ಗುರುತಿಸಲಾಯಿತು. ನಿ.ಪಿ.3 ಮತ್ತು 4 ಭಾವಚಿತ್ರಗಳಲ್ಲಿ ಸಾಕ್ಷಿ ತಮ್ಮ ಭಾವಚಿತ್ರ ನೋಡಿ ಗುರುತಿಸಿರುತ್ತಾರೆ. ನ್ಯಾಯಾಲಯದ ಮುಂದೆ ಇರುವ ಮು.ಮಾ.1 ನ್ನು ಸಾಕ್ಷಿ

ನೋಡಿ ಗುರುತಿಸಿರುತ್ತಾರೆ. ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

<u>ಪಾಟೀ ಸವಾಲು ಆರೋಪಿಯ ಪರವಾಗಿ ಶ್ರೀ. ಕೆ.ಟಿ. ವಕೀಲರಿಂದ</u>

3. ಆ ದಿನ ಓಡಿ ಹೋದ ವ್ಯಕ್ತಿಯನ್ನು ನೋಡಿದ್ದೇನೆ ಆದರೆ ನ್ಯಾಯಾಲಯದ ಮುಂದೆ ಇರುವ ವ್ಯಕಿಯೇ ಎಂದು ಹೇಳಲು ಬರುವುದಿಲ್ಲ. ಸದರಿ ಗಿಡಗಳು ಗಾಂಜಾಗಿಡಗಳು ಅಲ್ಲವೋ ಎಂಬ ಬಗ್ಗೆ ನನಗೆ ಗೊತ್ತಿಲ್ಲ ಎಂದರೆ ಸರಿ. ಬೀರಪ್ಪ ಪೇದೆ ಕರೆಯಲು ಬಂದಾಗ ನಾನು ಶಾಲೆಯಲ್ಲಿ ಇದ್ದೆ. ಇನ್ನೊಬ್ಬ ಶಿಕ್ಷಕರಾದ ಗುರು ಸಹ ಶಾಲೆಯಲ್ಲಿ ಇದ್ದರು. ಪಂಚನಾಮೆಗೆ ನಾನು ಪೊಲೀಸಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಪಂಚನಾಮೆಯಲ್ಲಿ ಬರೆದ ವಿಷಯ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ನಾವು ಹೊಲಕ್ಕೆ ಹೋದಾಗ ಸುತ್ತ ಮುತ್ತಲಿನ ಹೊಲದವರು ಯಾರು ಬಂದಿರಲಿಲ್ಲ. ಮುಖ್ಯ ಕೆನಾಲ ಮಾರ್ಗವಾಗಿ ನಾವು ಜಮೀನಿಗೆ ಹೋದೆವು. ಆ ಜಮೀನಿನ ಪಹಣಿ ನಾನು ನೋಡಿಲ್ಲ ಮತ್ತು ಯಾರ ಹೊಲ ಎಂದು ನನಗೆ ಗೊತ್ತಿಲ್ಲ.

4. ದಿಃ 24.09.2020 ರಂದು ನನ್ನನ್ನು ಮತ್ತು ಚಾಸಾ-2 ಗುರು ಸಹ-ಶಿಕ್ಷಕರು ಅವರನ್ನು ಕೆಂಭಾವಿ ಪೊಲೀಸಠಾಣೆಗೆ ಕರೆಯಿಸಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಬೀರಪ್ಪ ಪೇದೆ ಬಂದು ಬೆಳಿಗ್ಗೆ 10-00 ಗಂಟೆಗೆ ಬರುವಂತೆ ಹೇಳಿ ನಮ್ಮನ್ನು ಕರೆದುಕೊಂಡು ಹೋದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಗ್ನಿ ಸೀಮಾಂತರದ ಸರ್ವೆ ನಂ. 176 ರಲ್ಲಿ ಗಾಂಜಾ ಬೆಳೆದಿದ್ದಾರೆ ಎಂದು ಮಾಹಿತಿ ಬಂದಿದ್ದು ದಾಳಿ ಮಾಡಲು ಹೋಗಬೇಕು ನೀವು ಪಂಚರಾಗಿ ಸಹಕರಿಸಿ ಎಂದು ಹೇಳಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಪ್ರಕಾರ ನಾವು ಒಪ್ಪಿಕೊಂಡೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಬೆಳಿಗ್ಗೆ 11-30 ಗಂಟೆಗೆ ಪೊಲೀಸಠಾಣೆಗೆ ಬಿಟ್ಟೆವು ಘಟಾ ಸ್ಥಳಕ್ಕೆ 12-30 ಗಂಟೆಗೆ ತಲುಪಿದೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಅಲ್ಲಿ ಹೋಗಿ ನಿಂತುಕೊಂಡೆವು ನಮ್ಮ ಮುಂದೆ 2 ಫೀಟನ 70 ಗಾಂಜಾ ಗಿಡಗಳನ್ನು ಮತ್ತು 3 ವರೆ ಫೀಟನ 20 ಗಾಂಜಾ ಗಿಡಗಳನ್ನು ಕಿತ್ತಿ ಅವುಗಳಲ್ಲಿ ನಾಲ್ಕು ನಾಲ್ಕು ಪೆಂಡಿ ಮಾಡಿ ಅದರ ಮೇಲೆ ಚೀಟಿ ಅಂಟಿಸಿ ನಮ್ಮ ಸಹಿ ಪಡೆದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದನ್ನು ತೂಕ ಮಾಡಿದಾಗ ಒಟ್ಟು 22 ಕೆ.ಜಿ 400 ಗ್ರಾಮ ಗಾಂಜಾ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಂಚನಾಮೆಯನ್ನು ಮಧ್ಯಾಹ್ನ 1-30 ರಿಂದ 3-30 ಗಂಟೆಯವರೆಗೆ ಮಾಡಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ-ಇಲ್ಲ</u>

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಯಾದಗಿರಿ.